MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - MONDAY 8-5-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶಿಯನ್ ಪಾಮೆಣ್ಣೆ ದರ 2 ವಾರಗಳ ಗರಿಷ್ಠ ಮಟ್ಟಕ್ಕೆ

ಸತತ 4 ನೇ ದಿನ ಗಳಿಕೆ ಕಂಡ ಮಲೇಶಿಯನ್ ಪಾಮೆಣ್ಣೆ ದರ 54 ರಿಂಗಿಟ್ಸ್ (1.55 ಶೇಕಡಾ) ಹೆಚ್ಚಳದೊಂದಿಗೆ ಟನ್ ಗೆ 3655 ರಿಂಗಿಟ್ಸ್ ($ 824.03) ಆಗಿ 2 ವಾರಗಳ ಗರಿಷ್ಠ ಮಟ್ಟಕ್ಕೆ ಏರಿದೆ. ಎಪ್ರಿಲ್ ತಿಂಗಳ ಉತ್ಪಾದನೆ ಇಳಿಕೆ, ಹಾಗೂ ದಾಸ್ತಾನು ಇಳಿಕೆಯ ಕಳವಳದಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ರಫ್ತು ಬೇಡಿಕೆ ಇಳಿಕೆಯಾದಲ್ಲಿ ದರ ಮತ್ತೆ ಇಳಿಕೆಯಾಗಲೂ ಬಹುದು.

## ಜೋಳ, ಗೋಧಿ ದರ ಸ್ಥಿರ

ದೇಶೀ ಮಾರುಕಟ್ಟೆಗಳಲ್ಲಿ ಜೋಳ, ಗೋಧಿ ದರಗಳು ಹೆಚ್ಚಿನ ವ್ಯತ್ಯಾಸಗಳಿಲ್ಲದೆ ಸ್ಥಿರವಾಗಿದೆ.

## ಆಹಾರ ಶೇಖರಣೆ ಮತ್ತು ಸಾಗಾಣಿಕಾ ನಷ್ಟ ಗಣನೀಯ ಇಳಿಕೆ

ಸರಕಾರಿ ಏಜೆನ್ಸಿಗಳು ಆಹಾರ ಶೇಖರಣೆ ಮತ್ತು ಸಾಗಾಣಿಕೆಯಲ್ಲಿ ಉಂಟಾಗುವ ನಷ್ಟವನ್ನು ಗಣನೀಯ ಇಳಿಕೆ ಮಾಡಿವೆಯೆನ್ನಲಾಗಿದೆ. ಆಹಾರ ಧಾನ್ಯ ದಾಸ್ತಾನು ಹಾಗೂ ಸಾಗಾಣಿಕೆಯಲ್ಲಿ 2012–2013 ರಲ್ಲಿದ್ದ ನಷ್ಟದ ಪ್ರಮಾಣ 2022–23 ರ ಅವಧಿಗೆ ಗಣನೀಯ ಇಳಿಕೆಯಾಗಿದೆಯೆನ್ನಲಾಗಿದೆ.

## ಖಾದ್ಯ ತೈಲ ದರ ಇಳಿಕೆ

ಹಿಂದಿನ ಎರಡು ತಿಂಗಳುಗಳಿಂದ ಜಾಗತಿಕ ಖಾದ್ಯತೈಲ ದರಗಳು ಟನ್‌ಗೆ $ 200 ರಿಂದ $ 250 ಇಳಿಕೆ ಕಂಡಿವೆಯೆನ್ನಲಾಗಿದೆ. ದೇಶೀ ಮಾರುಕಟ್ಟೆಯಲ್ಲೂ ವಿವಿಧ ಕಂಪೆನಿಗಳು ಖಾದ್ಯ ತೈಲ ದರ ಇಳಿಕೆ ಮಾಡಲಿದೆಯೆನ್ನಲಾಗಿದೆ.

## ಬೇಳೆಕಾಳುಗಳ ದರ ನಿಯಂತ್ರಣದಲ್ಲಿ

ಸರಕಾರದ ವಿವಿಧ ಕ್ರಮಗಳಿಂದ ಬೇಳೆಕಾಳುಗಳ ದರ ನಿಯಂತ್ರಣದಲ್ಲಿವೆಯೆನ್ನಲಾಗಿದೆ. ಅಲ್ಪ ಸ್ವಲ್ಪ ವ್ಯತ್ಯಾಸಗಳೊಂದಿಗೆ ದರ ಸ್ಥಿರವಿದೆಯೆನ್ನಲಾಗಿದೆ. ದರದ ಮೇಲೆ ಸರಕಾರ ನಿರಂತರ ನಿಗಾ ವಹಿಸುತ್ತಿದೆಯೆನ್ನಲಾಗಿದೆ.

## ಜಾಗತಿಕ ಕೊರತೆ, ಹವಾಮಾನ ವೈಪರೀತ್ಯದ ಶಂಕೆ ಅಕ್ಕಿ ದರ ಹೆಚ್ಚಳದಲ್ಲಿ

ಜಾಗತಿಕ ಅಕ್ಕಿ ಕೊರತೆ ಹಾಗೂ ಮುಂದಿಗೆ ಖಾರೀಫ್ ಬಿತ್ತನೆಗೆ ಹವಾಮಾನ ವೈಪರೀತ್ಯದ ಶಂಕೆ ಯಿಂದ ಅಕ್ಕಿ ದರ ಹೆಚ್ಚಳದಲ್ಲಿ ಮುಂದುವರಿಯುವ ಸಾಧ್ಯತೆ ಅಧಿಕ. ಮುಂಗಾರು ವಿಳಂಬಗೊಂಡರೆ ಬಿತ್ತನೆ ವಿಳಂಬವಾಗುವ ಸಾಧ್ಯತೆಯಿದೆ ಹಾಗೂ ಮಳೆಯ ಪ್ರಮಾಣದಲ್ಲಿ ವ್ಯತ್ಯಾಸವಾದರೆ ಮುಂದಿನ ಖಾರೀಫ್ ಬೆಳೆಯ ಉತ್ಪಾದನೆಯಲ್ಲೂ ಪರಿಣಾಮ ಬೀರುವ ಸಾಧ್ಯತೆಗಳಿವೆ. ಈಗಿನ ದರದಲ್ಲಿ ಭಾರತೀಯ ಅಕ್ಕಿ ದರ ಜಾಗತೀಕ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿದೆಯೆನ್ನಲಾಗಿದೆ.